# ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ

#9, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 009

21–09–2021

## ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಕಾರ್ಯಾಗಾರದ ವರದಿ




ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ, ದಿನಾಂಕ 21–09–2021ರಂದು "ರಾಷ್ಟ್ರೀಯ ಶಿಕ್ಷಣ ನೀತಿ–2020" ರ ಅನುಸಾರವಾಗಿ 2021–22ನೇ ಸಾಲಿನಿಂದ ಬೋಧನೆಯನ್ನು ಆರಂಭಿಸಲಾಗುವುದರಿಂದ ಗಣಕ ವಿಜ್ಞಾನ ವಿಭಾಗದ ಮೊದಲನೆಯ ಸೆಮಿಸ್ಟರ್ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಿಗೆ NEP–2020 ಬಗ್ಗೆ ಅರಿವು ಮೂಡಿಸಲಾಯಿತು.

ಪ್ರಾಂಶುಪಾಲರಾದ ಡಾ. ಎಸ್. ಕಾಂತರಾಜುರವರು ತಮ್ಮ ವಿದ್ಯಾಸಂಸ್ಥೆಯ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಡಾ. ಬಿ.ಎಲ್. ಮಂಜುಳ, ಸಹ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ – ಸಂಚಾಲಕರು, ಈ ಮೊದಲಿನ ಶಿಕ್ಷಣ ನೀತಿಯ ಮತ್ತು ಹೊಸ ಶಿಕ್ಷಣ ನೀತಿಯ ಬಗೆಗಿನ ವ್ಯತ್ಯಾಸಗಳನ್ನು ವಿವರಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪದವಿಯು ನಾಲ್ಕು ವರ್ಷದ್ದಾಗಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಆಯ್ಕೆಗಳಿವೆ ಎಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಕೆಲಸ ಸಿಕ್ಕಿದರೆ ಅಥವಾ ವಿದ್ಯಾಭ್ಯಾಸವನ್ನು ಮುಂದುವರಿಸಲು ಏನಾದರೂ ತೊಂದರೆ ಆದಲ್ಲಿ ಆಯಾ ವರ್ಷದ ಕೊನೆಯಲ್ಲಿ ಒಳ್ಳೆ ಅಂಕಗಳನ್ನು ಗಳಿಸಿ ಪರೀಕ್ಷೆ ಪಾಸಾದಲ್ಲಿ, ಪ್ರಮಾಣ ಪತ್ರಗಳನ್ನೂ ನೀಡಲಾಗುವುದು. ಮೊದಲನೇ ವರ್ಷದ ಕೊನೆಯಲ್ಲಿ ವಿದ್ಯಾರ್ಥಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗದಿದ್ದಲ್ಲಿ, ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಪ್ರಮಾಣ ಪತ್ರವನ್ನು ಕೊಡಲಾಗುವುದು ಹಾಗೇ ಎರಡನೇ ವರ್ಷದ ಕೊನೆಯಲ್ಲಿ ಉತ್ತೀರ್ಣನಾದರೆ ಡಿಪ್ಲೊಮೋ ಪ್ರಮಾಣ ಪತ್ರವನ್ನು, ಮೂರನೇ ವರ್ಷದ

ಕೊನೆಯಲ್ಲಿ ಪದವಿ ಪ್ರಮಾಣ ಪತ್ರಗಳನ್ನೂ ನೀಡಲಾಗುವುದು. ಪುನ: ವಿದ್ಯಾರ್ಥಿಯು ನಿಗಧಿತ ಸಮಯದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಬಹುದು. ಆದ್ದರಿಂದ ರಾಷ್ಟ್ರೀಯ ಶಿಕ್ಷಣ ನೀತಿಯು ಹೆಚ್ಚು ವಿದ್ಯಾರ್ಥಿ ಕೇಂದ್ರೀಕೃತವಾಗಿದೆ ಎಂದು ವಿವರಿಸಿದರು. Discipline Elective (ಶಿಸ್ತು ಆಯ್ಕೆ) Open Elective (ತೆರೆದ ಆಯ್ಕೆ) Compulsory subjects (ಕಡ್ಡಾಯ ವಿಷಯಗಳು) ಬಗ್ಗೆ ಮಾಹಿತಿ ನೀಡಿ ಈ ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳ ಸಾಮರ್ಥ್ಯ ಹಾಗೂ ಕೌಶಲ್ಯ ಹೆಚ್ಚಿಸುತ್ತದೆ ಎಂದು ತಿಳಿಸಿದರು. ಪ್ರತಿಯೊಬ್ಬ ವಿದ್ಯಾರ್ಥಿಯು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕಿದೆ. ಕನ್ನಡವನ್ನು +2ವರೆಗೆ ಕಲಿಯದಿದ್ದರೆ ಕನ್ನಡ ಭಾಷೆಯ ಪಠ್ಯಕ್ರಮ ಬೇರೆ ಇರುತ್ತದೆ. ಕನ್ನಡವನ್ನು +2ವರೆಗೆ ಕಲಿತವರಿಗೆ ಕನ್ನಡ ಭಾಷೆಯ ಪಠ್ಯಕ್ರಮ ಬೇರೆ ಇರುತ್ತದೆ ಎಂದು ತಿಳಿಸಿದರು.

ಪ್ರೊ. ಹೇಮಂತ್ ಕುಮಾರ್ .ಕೆ .ಜಿ, ಸಹಾಯಕ ಪ್ರಾಧ್ಯಾಪಕರು ಮತ್ತು ಗಣಕಯಂತ್ರ ವಿಜ್ಞಾನ ವಿಭಾಗದ ಮುಖ್ಯಸ್ಥರು, ಎಲ್ಲ ಸೆಮಿಸ್ಟರ್‌ಗಳ ಪಠ್ಯಕ್ರಮದ ಬಗ್ಗೆ, ಶಿಸ್ತು ಆಯ್ಕೆ ಮತ್ತು ತೆರೆದ ಆಯ್ಕೆ ವಿಷಯಗಳ ಬಗ್ಗೆ ವಿವರವಾಗಿ ತಿಳಿಹೇಳಿದರು.

ಡಾ. ಮೀರಾ, ಸಹಾಯಕ ಪ್ರಾಧ್ಯಾಪಕರು, ವ್ಯವಹಾರ ನಿರ್ವಹಣೆ ವಿಭಾಗದ ಮುಖ್ಯಸ್ಥರು, ಕಾರ್ಯಕ್ರಮದ ಅತಿಥಿಗಳಾದ ಪ್ರೊ. ಗೌರಿ ನಾಯ್ಡುರವರನ್ನು ಸ್ವಾಗತಿಸಿದರು.

ಪ್ರೊ. ಗೌರಿ ನಾಯ್ಡುರವರು ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಶಿಕ್ಷಕರ ಪಾತ್ರದ ಬಗ್ಗೆ ವಿವರಿಸಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಇರುವ ಸಂದೇಹವನ್ನು ಹೇಗೆ ನಿವಾರಿಸಬೇಕೆಂದು ಸೂಕ್ಷ್ಮವಾಗಿ ತಿಳಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕುರಿತು ವಿವರವಾಗಿ ಮಾತನಾಡಿ ಕೆಲವರ ಸಂದೇಹಗಳನ್ನೂ ನಿವಾರಿಸಿದರು.






ಡಾ. ಎಂ.ಜಿ. ಮೀನಾಕ್ಷಿ, ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗದ ಮುಖ್ಯಸ್ಥರು, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವುದರಲ್ಲಿ ನಮ್ಮ ರಾಜ್ಯ ಮೊದಲು ಎನ್ನುವುದು ಹೆಮ್ಮೆಯ ಸಂಗತಿ ಎಂದು ಹೇಳುತ್ತಾ, ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ವಂದನೆಗಳನ್ನು ತಿಳಿಸಿದರು.

ಎಲ್ಲಾ ಬೋಧಕರೂ ಭಾಗವಹಿಸಿದ್ದರು.

21.09.21

ಡಾ. ಬಿ.ಎಲ್. ಮಂಜುಳ

ಸಂಚಾಲಕರು

(ರಾಷ್ಟ್ರೀಯ ಶಿಕ್ಷಣ ನೀತಿ 2020)

PRINCIPAL
Sri Jagadguru Renukacharya College
of Science, Arts & Commerce
Bengaluru-560 009.